ಎಚ್.ಕೆ. ಸುಬ್ಬಲಕ್ಷ್ಮಿ, ಕೋಲಾರ

ಇಲ್ಲೊಬ್ಬರು ತಮ್ಮ ಮನೆಗೆ 'ಕೊರೊನಾ' ಎಂದು ಹೆಸರಿಟ್ಟಿರುವರಲ್ಲಾ, ಕಾರಣವೇನಿರಬಹುದು?




ಬಂದವರನ್ನು ಆರು ಅಡಿ ದೂರದಿಂದಲೇ ಮಾತನಾಡಿಸಿ ಕಳುಹಿಸುತ್ತೇವೆಂಬ ಸೂಚನೆಯದು.

ನರಸಿಂಹ ಪೈ, ಕಾಸರಕೋಡ

ಸತ್ಯವೆಂಬುದು ಬೂದಿ ಮುಚ್ಚಿದ ಕೆಂಡದಂತೆ ಎಂದು ಹೇಳುವುದೇಕೆ?

ಹತ್ತಿರವೂ ಸುಳಿಯದವರಿಗೆ ಮರೆಯಾಗಿದ್ದು ಮುಟ್ಟಿದವರನ್ನೇ ಸುಡುವುದರಿಂದ.

ಪಿ.ಜೆ. ರಾಘವೇಂದ್ರ, ಮೈಸೂರು

ಅಸ್ಪೃಶ್ಯತೆಯ ಆಚರಣೆಗೂ, ಸಾಮಾಜಿಕ ಅಂತರ ಕಾಯ್ದುಕೊಳ್ಳುವುದಕ್ಕೂ ಏನು ವ್ಯತ್ಯಾಸ?

ಅದು ಅಂಧಾನುಕರಣೆ, ಇದು ಅಂದವಾದ ಅನುಸರಣೆ.

ಬೂಕನಕೆರೆ ವಿಜೇಂದ್ರ, ಮೈಸೂರು

ಗಂಡಸರ ಕ್ರಿಕೆಟ್‌ನಂತೆ ಹೆಂಗಸರ ಕ್ರಿಕೆಟ್ ಏಕೆ ಅಷ್ಟು ಜನಪ್ರಿಯವಾಗಿಲ್ಲ?



ಹೆಣ್ಣು ತಮ್ಮಂತಹ ಪ್ರಚಂಡರ ಹಿಂದೆ ಓಡುವ ಬದಲು ಚೆಂಡಿನ ಹಿಂದೆ ಓಡುವುದು ಗಂಡುಪಡೆಗೆ ಇಷ್ಟವಾಗದಂತೆ.

ಅಭಿಷೇಕ್ ರ. ಬೊಂಗಾಳೆ, ಬೈಲಹೊಂಗಲ

ಈಗಿನ ಯುವಕರಲ್ಲಿ ದುಡಿಯುವ ಆಸಕ್ತಿ ಏಕೆ ಇರುವುದಿಲ್ಲ ರಾಮ್ ಸರ್?

ಹೊಣೆ ಬಿದ್ದಿರುವುದಿಲ್ಲವಲ್ಲ; ಭಾರ, ಶಾಖ ತಾಗಿದಾಗಲೇ ಇಸ್ತ್ರಿ ಸಾಧ್ಯ.

ವಿ. ಹೇಮಂತಕುಮಾರ್, ಬೆಂಗಳೂರು

ನಾಚಿಕೊಂಡಾಗ ಹೆಣ್ಣಿನ ಕೆನ್ನೆ ಕೆಂಪಾಗುವುದು ಏಕೆ ರಾಮ್‌ಜೀ?

ಗುಲಾಬಿಯಾಗಿದ್ದೇನೆ, ಲಾಬಿಯಿಂಗ್ ಆರಂಭಿಸಬಹುದು ಎಂದು ಸೂಚಿಸಲು.

ಎಂ.ಬಿ. ರಂಗಪ್ಪಶೆಟ್ಟಿ, ಮೋಕಾ

ಪ್ರಧಾನಿಗಳ ಕೊರೊನಾ ನಿಧಿಗೆ ಮಾಜಿ ರಾಜ್ಯಸರ್ಕಾರದ ಮಾಜಿ ಮಂತ್ರಿಗಳು ಏನು ಕೊಡುಗೆ ನೀಡಿದ್ದಾರೆ?

'ಎಲ್ಲರೂ ಕೈಲಾದಷ್ಟು ಸಹಾಯ ಮಾಡಿ' ಎಂದು ಕರೆ ನೀಡಿದ್ದಾರೆ.

ಮೋಹನರಾಜು ಎಸ್.ಎ. ಶಂಕರಘಟ್ಟ

ವ್ಯಕ್ತಿಯ ಧನ ನೋಡಿ ಬರುವಷ್ಟು ಜನ ವ್ಯಕ್ತಿ 'ನಿಧನ'ವಾದಾಗ ಬರುತ್ತಾರೆಯೆ?

ಛೆ! ಹೆಣ ಸುಡಲು ಅಷ್ಟೊಂದು ಜನ ಬೇಕಾಗಲ್ಲ ಸಾರ್.

ಚೆನ್ನವೀರಪ್ಪ, ಬಿದರಹಳ್ಳಿ

ಕತ್ತಲಲ್ಲಿ ಬೆಳಕನ್ನು ಹುಡುಕಬಹುದೆ?

ಖಂಡಿತ. ಗಾಢಾಂಧಕಾರದಲ್ಲಿ ಕೈಬೆರಳುಗಳೇ ಕಣ್ಣುಗಳು, ಸ್ಪರ್ಶವೇ ದೃಷ್ಟಿ.

ಅನಸೂಯ ಟಿ. ಕೇದಿಗೆಮನೆ

ಇಲ್ಲೊಬ್ಬರಿಗೆ ಲಾಕ್‌ಡೌನ್‌ನಿಂದ ನೆಂಟರ ಕಾಟ ತಪ್ಪಿದೆಯಂತೆ. ಮುಂದೆ?

ಇಂತಹ ಬೂಟಾಟಿಕೆಗಿಂತ ನೇರವಾಗಿ ನುಡಿದು ಸಾಮಾಜಿಕ ಅಂತರ ಕಾಪಾಡಿಕೊಳ್ಳಲಿ.

ರಮಾನಂದ ಶರ್ಮಾ, ಬೆಂಗಳೂರು

ಅತಂತ್ರ ಸದನದಲ್ಲಿ ಸ್ವತಂತ್ರ ಸದಸ್ಯನಾಗಿರಬೇಕೆನ್ನುವ ಆಸೆ?

ಗುಡ್. 'ನಿಷ್ಠೆ ಮಾರಾಟಕ್ಕಿದೆ' ಎಂಬ ಬೋರ್ಡನ್ನೂ ನೇತುಹಾಕಿಕೊಂಡುಬಿಡಿ.

ಸುಮನಾ, ತೆಲಂಗಾಣ

ಪ್ರಪಂಚವನ್ನು ಭಯಂಕರ ಕೊರೊನಾಗಿಂತಲೂ ನಡುಗಿಸಿದ ಭೀಭತ್ಸ ಗ್ರಹಣ ಮತ್ತೊಂದಿಲ್ಲವಂತೆ?

ಇದ್ದವು. ಆಗೆಲ್ಲಾ ಬ್ರೇಕಿಂಗ್ ನ್ಯೂಸ್ ಪೀಡೆಗಳು ಇಲ್ಲದಿದ್ದರಿಂದ ಇಷ್ಟು ಅಬ್ಬರವಿರಲಿಲ್ಲ.

ಎನ್. ವೈದೇಹಿ, ಮೈಸೂರು

ಪರಸ್ಪರ ಪ್ರೀತಿ ವಿಶ್ವಾಸ ಮತ್ತು ಅನ್ಯೋನ್ಯತೆಯಿಂದ ಇರುವವರನ್ನು ಕಂಡರೆ ದೇವರಿಗೂ ಅಸೂಯೆ ಏಕೆ?

ಇರಲೇಬೇಕಲ್ಲ. ನಮ್ಮಿಂದಲೇ ಸೃಷ್ಟಿಯಾದ ದೇವನಿಗೆ ನಮ್ಮದೇ ಗುಣಗಳು.

## ಬಹುಮಾನಿತ ಪ್ರಶ್ನೆ

ಬಿ.ಎಸ್. ನರಸಿಂಹಮೂರ್ತಿ, ಚೆನ್ನೈ

ವಿವಾಹಪತ್ರಿಕೆಯಲ್ಲಿ ಬಂಧುಮಿತ್ರರಿಗೆ ಸ್ವಾಗತ ಎಂದು ಬರೆಯದೆ 30 ಜನ ಮಾತ್ರ ಬನ್ನಿ ಎಂದು ಕರೆದರೆ ಹ್ಯಾಗಿರುತ್ತೆ?

ಅದು ವಿವಾಹಪತ್ರಿಕೆಯಲ್ಲದೆ ವಿವಾದಪತ್ರಿಕೆ ಆಗಿರುತ್ತೆ.

ಕೆ.ಪಿ. ರಾಮಗುಂಡಿ, ಬೈಲಹೊಂಗಲ

ದಾನಗಳಲ್ಲಿ ಶ್ರೇಷ್ಠ ದಾನ ಯಾವುದು?

ಬೇಸಿಗೆಯಲ್ಲಂತೂ, ಶಿವದಾನ.

ವಿಜಯ್‌ಕುಮಾರ್ ಎಚ್.ಕೆ. ರಾಯಚೂರು

ಸೃಷ್ಟಿಯು ಮನುಷ್ಯನನ್ನು ಕೈಗೊಂಬೆಯಾಗಿಸಿಕೊಂಡು ಏಕೆ ಕೃತ್ರಿಮವೆಸಗುತ್ತಿದೆ?

ಮನುಷ್ಯ ಸೃಷ್ಟಿಯ ಮೇಲೆ ನಿರಂತರ ಅತ್ಯಾಚಾರ ಎಸಗಿದ್ದಕ್ಕೆ.

ನರಸಿಂಹಾರೆಡ್ಡಿ, ಸೇಡಂ

ಕರೋನ ನಮಗೆ ಕಲಿಸಿದ ಪಾಠ ಏನು ಗುರುಗಳೇ?



ತಬ್ಬಿ ತಬ್ಬಿಬ್ಬಾಗುವುದಕ್ಕಿಂತ ನಮಿಸಿ ನಿಲ್ಲುವುದರಲ್ಲಿ ನೆಮ್ಮದಿ ಇದೆಯೆಂದು.

ತಲಕಾಡು ಶ್ರೀನಿಧಿ, ಬೆಂಗಳೂರು

ಪ್ರತಿ ವರ್ಷ ಶಾಲೆಗಳಲ್ಲಿ ಬಿಲ್ಡಿಂಗ್ ಫಂಡ್ ಅಂತ ತೊಗೋತಾರಲ್ಲ, ಅದು ಯಾವ ಬಿಲ್ಡಿಂಗ್ ಸರ್?

ಸರಿಯಾಗಿ ತಿಳಿಯಿರಿ; ಬಿಲ್ಡಿಂಗ್ ಫಂಡ್ ಎಂದರೆ ಫಂಡನ್ನು ಬಿಲ್ಡ್ ಮಾಡುವುದೆಂದರ್ಥ.

ವಿ. ಹಮೀದ್, ವಿಟ್ಲ

ಡಬ್ಬಲ್ ಲವ್ ಯಾವುದರಿಂದ ಆಗುತ್ತದೆ ರಾಮ್‌ಜೀ?

ಮುದ್ದಾದ ಅವಳಿಜವಳಿಗಳ ಸಾಮೀಪ್ಯದಿಂದ.

ಪ್ರಶ್ನೆಗಳನ್ನು ಕಳುಹಿಸಿ
editorsu@sudha.co.in

■ ರಾಮ್